ಮಾಡಿ ತೋರ್ಸು ಮಗ್ನೆ!" ಅಂತ ಅಬ್ಬರಿಸಿ ಬೊಬ್ಬಿರಿದು ಘರ್ಜಿಸಿ ಡ್ಯಾನ್ಸ್ ಮಾಡುವುದು.

ಇವರ ನಡತೆ ಬಹು ಸರಳ. ತೆರೆಯ ಮೇಲೆ ಹೀರೋ ಏನೇನು ಮಾಡುತ್ತಾನೋ ಅದನ್ನು ಅನವಶ್ಯಕ ಸಿಟ್ಟು ಸೆಡವು, ಹುಚ್ಚು ವೀರಾಗ್ರೇಸರ ನಡವಳಿಕೆಯನ್ನು ಪ್ರದರ್ಶಿಸುತ್ತಾ ಅದು ಕೆಟ್ಟ ರೀಮೇಕೇ ಆದರೂ ತಮ್ಮ 'ಅಣ್ಣನ' ಸಿನಿಮಾ ಅನ್ನು ಸಮರ್ಥಿಸಿಕೊಳ್ಳುವುದು. ಇವರು ಇನ್ನೂ ಜಾಲತಾಣದಲ್ಲಿ ಕೂಗಿ ಕಿರುಚಿ ಅಪಭ್ರಂಶ ಮಾಡುತ್ತಿರುವಾಗಲೇ 'ಅಣ್ಣನ' ಸಿನಿಮಾ ಥೇಟರಿನಿಂದ ತೆಲುಗು ಇಲ್ಲವೇ ತಮಿಳು ಸಿನಿಮಾಕ್ಕೆ ದಾರಿ ಮಾಡಿಕೊಟ್ಟು ಹೇಳ ಹೆಸರಿಲ್ಲದಂತೆ ಆಗಿರುತ್ತದೆ. ಆದರೆ ಈ ವಿಷಯ ಅಭಿಮಾನಿಗಳ ಸುಪರ್ದಿಗೆ ಬರುವುದಿಲ್ಲ ಅಂತ ಕಾಣಿಸುತ್ತೆ. ಅವರು ಕೇವಲ ಟೀಕೆ ಮಾಡುವವರಿಗೆ ವರ್ಚುವಲ್ ಗುಂಡು ಹೊಡೆಯುವವರು. ಅಲ್ಲಿಗೆ ಅವರ ಕೆಲಸ ಖತಂ. ಮತ್ತೆ ಹೊಸ ಸಿನಿಮಾ ರಿಲೀಸ್ ಆಗುವವರೆಗೂ ತಮ್ಮ ಬೆರಳ ತುದಿಯ ಕತ್ತಿಯನ್ನು ಒರೆಗೆ ಹಾಕಿ ಆರಾಮಾಗಿ ಅಡ್ಡಾಡುತ್ತಾರೆ.

ವಯಸ್ಸಿನ ಮಟ್ಟಿಗೆ ಅಲ್ಲದಿದ್ದರೂ ತಂತ್ರಜ್ಞಾನದ ಮಟ್ಟಿಗೆ ನರ್ಸರಿ ಶಾಲೆಯಂತೇ ಇರುವ ಈ ಫೇಸ್‌ಬುಕ್ಕೆಂಬ ಸಾಮಾಜಿಕ ಜಾಲತಾಣದ ಬೃಹತ್ ಖೆಡ್ಡಾಕ್ಕೆ ದಶಕಕ್ಕೂ ಹಿಂದೆ (11–12 ವರ್ಷದ ಹಿಂದೆ) ಕಾಲಿಟ್ಟ ಹೊಸತರಲ್ಲಿ ಅಂಥಾ ವಿಶೇಷವೇನೂ ಇರಲಿಲ್ಲ. 'ಹಾಗೇ ಸುಮ್ಮನೆ...' ಅಂತ ಬಂದವರು ನಾವು.

ನಾನು ಹೇಗೆ ಇಲ್ಲಿಗೆ ಬಂದೆ ಎನ್ನುವ ನೆನಪಂತೂ ನನಗೆ ಸ್ಪಷ್ಟವಾಗಿದೆ. ಒಂದು ಅಂತರರಾಷ್ಟ್ರೀಯ ಅಸೈನ್ಮೆಂಟಿಗೆ ದೆಹಲಿಯ ನಾಲ್ಕೈದು ಹಿರಿಯ ಮಹಿಳಾ ಪತ್ರಕರ್ತರ ಜೊತೆ ಸಾಕಷ್ಟು ದಿನ ಪ್ರಯಾಣಿಸಬೇಕಿತ್ತು. ಅವರೆಲ್ಲಾ ಸಿಕ್ಕಾಪಟ್ಟೆ ಕೆಲಸ ಮಾಡಿ, ಪ್ರಭಾವಿಗಳ ಜೊತೆ ಒಡನಾಡಿ ಹುರಿಗಟ್ಟಿದವರು. ದಕ್ಷಿಣದ ನಮ್ಮನ್ನು ನೋಡಿ "ಅಯ್ಯೋ, ನಿಮ್ಮದೂ ಒಂದು ಕೆಲಸನಾ?" ಅನ್ನುವ ಭಾವ ಬೆಳೆಸಿಕೊಂಡವರು ಅಂತ ನನಗೆ ಅನ್ನಿಸುತ್ತಿತ್ತು.

ನಮ್ಮ ನಮ್ಮ ಕೆಲಸದ ಬಗ್ಗೆ ಚರ್ಚಿಸಿದಾಗಲೆಲ್ಲಾ, ನಾವು ಬರೆದ ರಾಜಕೀಯ ಲೇಖನಗಳನ್ನು ಪ್ರಸ್ತಾಪ ಮಾಡಿದಾಗಲೆಲ್ಲಾ ಅವರು ಅದನ್ನು ಫೇಸ್‌ಬುಕ್ಕಿನಲ್ಲಿ ಹಾಕಿದರೆ ಚೆನ್ನಾಗಿರುತ್ತಿತ್ತು, ತಮಗೂ ಓದಲು ಸಿಗುತ್ತಿತ್ತು ಎನ್ನುತ್ತಲೇ ನನಗೆ ವಿವಿಧ ಸಂದರ್ಭಗಳಲ್ಲಿ ಕೇಳಿದ್ದು ಒಂದೇ ಮಾತು...''ಸೋ? ಯಾಕೆ ಡಿಲೇ ಮಾಡ್ತಿದೀ? ಗೆಟ್ ಆನ್ ಫೇಸ್‌ಬುಕ್!'' ಇದು 2007 – 08ರ ಆಸುಪಾಸಿನ ವಿಷಯ.

ಇದನ್ನ ಕೇಳಿ ಕೇಳಿ ನನಗೆ ಈ ಫೇಸ್‌ಬುಕ್ಕೆಂಬುದು ಅತ್ಯಂತ ಚುರುಕುಮತಿಗಳ ಹಾಗೂ ಬುದ್ಧಿವಂತರ ವಿಷಯ ಹಂಚಿಕೆಯ ತಾಣ, ಮತ್ತು ಇದಕ್ಕೆ 'ಎಲೀಟ್' ಮಂದಿ ಮಾತ್ರವೇ ಅರ್ಹತೆ ಗಳಿಸುತ್ತಾರೆ ಎಂಬ ಕಲ್ಪನೆ ಮನೆಮಾಡಿಬಿಟ್ಟಿತ್ತು!

ಅವರೆಲ್ಲರ ಮಾತಿನಿಂದ ಉತ್ತೇಜಿತಗೊಂಡು ಊರಿಗೆ ವಾಪಸು ಬಂದ ತಕ್ಷಣ ತಡ ಮಾಡದೆ ಫೇಸ್‌ಬುಕ್ಕೆಂಬ ಪವಿತ್ರ ತೀರ್ಥಕ್ಷೇತ್ರದಲ್ಲಿ ಅಕೌಂಟ್ ಓಪನ್ ಮಾಡಿದೆ. ಮೊಬೈಲಿನಲ್ಲಿ ಇದ್ದ ಯಾವುದೋ ಮಸುಕು ಮಸುಕಾದ ಫೋಟೊ ಅಪ್ ಲೋಡ್ ಮಾಡಿದೆ. ಆಮೇಲೆ ಮರೆತುಬಿಟ್ಟು ಕೆಲಸಗಳಲ್ಲಿ ಮುಳುಗಿದೆ.

ಯಾವಾಗಲೋ ಒಂದು ಫೋಟೊವನ್ನೋ, ಸುಭಾಷಿತದಂತಹ ಒಂದು ವಾಕ್ಯವನ್ನೋ ಹಂಚಿಕೊಂಡರೆ ಆಯಿತು. ಅದನ್ನು ಯಾರು ನೋಡಿದರೊ ಬಿಟ್ಟರೂ ಏನೂ ವ್ಯತ್ಯಾಸ ಆಗುತ್ತಿರಲಿಲ್ಲ.

ಯಾವ ಸ್ನೇಹಿತರೂ ಈವತ್ತಿನ ಹಾಗೆ ಫೇಸ್‌ಬುಕ್ ಕಟ್ಟೆ ಕಾಯುತ್ತಾ ಕೂರುತ್ತಿರಲಿಲ್ಲ. ಯಾವಾಗ ಬೇಕಾದಾಗ ಬರುತ್ತಿದ್ದರು, ಮತ್ತೆ ವಾರಗಟ್ಟಲೆ, ತಿಂಗಳುಗಟ್ಟಲೆ ಇತ್ತ ಸುಳಿಯುತ್ತಿರಲಿಲ್ಲ. ಆಮೇಲೆ ಮತ್ಯಾವಾಗೋ ಇಣುಕಿದರೆ ಮುಗಿಯಿತು. ಮತ್ತೆ ಲೌಕಿಕದಲ್ಲಿ ಮುಳುಗಿರುತ್ತಿದ್ದೆವು. ಆದರೆ